ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	502 (593)
ಸದಸ್ಯರ ಹೆಸರು	:	ಶ್ರೀ ಐವನ್ ಡಿ' ಸೋಜಾ (ನಾಮ ನಿರ್ದೇಶನ ಹೊಂದಿದವರು)
ಉತ್ತರಿಸಬೇಕಾದ ದಿನಾಂಕ	:	10-03-2020
ಉತ್ತರಿಸುವ ಸಚಿವರು	:	ಮಾನ್ಯ ನಗರಾಭಿವೃದ್ಧಿ ಸಚಿವರು.

ಕ್ರ. ಸಂ	ಪ್ರಶ್ನೆ	ಉತ್ತರ
ಅ)	ಮಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ರೈಲ್ವೆ ಇಲಾಖೆಯ ಮಹಾಕಾಳಿ ಪಡ್ಪುನಲ್ಲಿರುವ ಕೆಳಸೇತುವೆ/ ಮೇಲು ಸೇತುವೆ ರಚನೆಗೆ ಸ್ಮಾರ್ಟ್ ಸಿಟಿಯಿಂದ ಹಣವನ್ನು ಮೀಸಲಿಡಲಾಗಿದೆಯೇ; ಈ ಯೋಜನೆಯ ಕಾಮಗಾರಿ ಕೈಗೊಳ್ಳದಿರಲು ಕಾರಣಗಳೇನು; ಯಾವಾಗ ಕಾಮಗಾರಿ ಪ್ರಾರಂಭಿಸಲಾಗುವುದು; (ವಿವರ ನೀಡುವುದು)	ಮಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ ಮಹಾಕಾಳಿ ಪಡ್ಪುನಲ್ಲಿರುವ ರೈಲ್ವೆ ಲೆವೆಲ್ ಕ್ರಾಸಿಂಗ್ ಬಳಿ ಕೆಳ ಸೇತುವೆ (Road Under Bridge-RUB) ನಿರ್ಮಾಣಕ್ಕೆ ಮಂಗಳೂರು ಸ್ಮಾರ್ಟ್ ಸಿಟಿ ವತಿಯಿಂದ ಹಣ ಮೀಸಲಿಡಲಾಗಿದೆ. ಈ ಕೆಳ ಸೇತುವೆ (Road Under Bridge-RUB) ನಿರ್ಮಾಣಕ್ಕೆ ಸಾಮಾನ್ಯ ವಿನ್ಯಾಸ ನಕ್ಷೆ (General Alignment Drawing - GAD) ಹಾಗೂ ಅಂದಾಜು ಪಟ್ಟಿಯನ್ನು ರೈಲ್ವೆ ಇಲಾಖೆಯವರು ತಯಾರಿಸಬೇಕಾಗಿರುತ್ತದೆ. ಈ ಎಲ್ಲಾ ಪ್ರಕ್ರಿಯೆಯು ಕಳೆದ 6 ತಿಂಗಳನಿಂದ ಚಾಲ್ತಿಯಲ್ಲಿರುತ್ತದೆ. ಪ್ರಸ್ತಾವಿತ ಕೆಳ ಸೇತುವೆ (Road Under Bridge-RUB) ಕಾಮಗಾರಿಯನ್ನು ರೈಲ್ವೆ ಇಲಾಖೆಗೆ ಸ್ಮಾರ್ಟ್ ಸಿಟಿ ವತಿಯಿಂದ ವಹಿಸಿಕೊಡಲಾಗಿದ್ದು, ಕಾಮಗಾರಿ ಬಗ್ಗೆ ಸಾಮಾನ್ಯ ವಿನ್ಯಾಸ ನಕ್ಷೆಯನ್ನು (General Alignment Drawing -GAD) ರೈಲ್ವೆ ಇಲಾಖೆಯವರು ತಯಾರಿಸಿದ್ದು, ನಕ್ಷೆಯ ಅನುಸಾರ ಅಂದಾಜು ಪಟ್ಟಿಯನ್ನು ತಯಾರಿಸಿದ ನಂತರ ಸ್ಮಾರ್ಟ್ ಸಿಟಿಯಿಂದ ರೈಲ್ವೆ ಇಲಾಖೆಗೆ ಅನುದಾನವನ್ನು ಬಿಡುಗಡೆ ಮಾಡಲಾಗುವುದು. ಸದ್ಯಕ್ಕೆ ಯೋಜನೆಯ ರೇಖಾಚಿತ್ರವು ಚೆನ್ನೈ ರೈಲ್ವೆ ಇಲಾಖೆಯಿಂದ ಫಾಲ್ಘಾಟ್ ರೈಲ್ವೆ ಇಲಾಖೆಗೆ ರವಾನೆಗೊಂಡಿದ್ದು, ಫಾಲ್ಘಾಟ್ ರೈಲ್ವೆ ಇಲಾಖೆಯವರು ಅಂದಾಜು ಪಟ್ಟಿ ತಯಾರಿಸುವ ಪ್ರಕ್ರಿಯೆಯಲ್ಲಿ ತೊಡಗಿರುತ್ತಾರೆ. ಈ ಕಾಮಗಾರಿಗೆ ಒಟ್ಟು 18 ತಿಂಗಳ ಕಾಲಾವಧಿ ಬೇಕಾಗಿರುತ್ತದೆ ಎಂದು ರೈಲ್ವೆ ಇಲಾಖೆಯು ಅಭಿಪ್ರಾಯಪಟ್ಟಿರುತ್ತದೆ.
ಆ)	ಮಹಾನಗರ ಪಾಲಿಕೆ ವ್ಯಾಪ್ತಿಯ ಒಳಗೆ ಇರುವ ಯಾವ ರೈಲ್ವೆ ಕಾಮಗಾರಿಗಳಿಗೆ ನಗರ ಪಾಲಿಕೆ ಅನುದಾನ ಒದಗಿಸಲಾಗಿದೆ; ನಗರ ಪಾಲಿಕೆ ವ್ಯಾಪ್ತಿಯಲ್ಲಿ ರೈಲ್ವೆ ಕಾಮಗಾರಿಗಳು ನಿಧಾನಗತಿಯಲ್ಲಿ ಸಾಗಲು ಕಾರಣಗಳೇನು : (ವಿವರ ನೀಡುವುದು)	1. ಮಂಗಳೂರು ಮಹಾನಗರ ಪಾಲಿಕೆ ವತಿಯಿಂದ ಸರಿಪಳ್ಳ ಬಳಿ ರೈಲ್ವೆ ಇಲಾಖೆಯಿಂದ ಕುಲಶೇಖರ ಬಳಿ KM 8/400-9/100 ವ್ಯಾಪ್ತಿಯಲ್ಲಿ ಮಂಗಳೂರು ಜಂಕ್ಷನ್ ನಿಂದ ತೋಕೂರು ಸೆಕ್ಷನ್ ಬಳಿ ರಸ್ತೆ ನಿರ್ಮಿಸಲು ರೈಲ್ವೆ ಇಲಾಖೆಗೆ Way Leave Facility ಗಾಗಿ ರೂ.1,32,30,014.00 ವನ್ನು ಪಾಲಿಕೆ ವತಿಯಿಂದ ಪಾವತಿಸಿದ್ದು, ತದ ನಂತರ ಪಾಲಿಕೆ ವತಿಯಿಂದ ರೈಲ್ವೆ ಇಲಾಖೆಯಿಂದ ಪಡೆದ ಸ್ಥಳದಲ್ಲಿ ಸರ್ಕಾರದ 100 ಕೋಟಿ 2ನೇ ಹಂತದ ಅನುದಾನದಲ್ಲಿ ಡಾಂಬರು ರಸ್ತೆ ನಿರ್ಮಿಸಲಾಗಿದ್ದು, ಅದಕ್ಕೆ ರೂ.70,16,575.00 ಖರ್ಚಾಗಿರುತ್ತದೆ. 2. ಜಪ್ಪುಕುಡುಪಾಡಿ ಬಳಿ ಕೆಳ ಸೇತುವೆ ನಿರ್ಮಾಣಕ್ಕೆ ರೂ.4,41,49,987.00 ಅನುದಾನ ಒದಗಿಸಲಾಗಿದೆ. ಸದರಿ ಕಾಮಗಾರಿಯನ್ನು ರೈಲ್ವೆ ಇಲಾಖೆಯಿಂದ ನಿರ್ವಹಿಸಲಾಗಿರುತ್ತದೆ.

ಇ)	ಮಹಾಕಾಳಪಡ್ಪು ರೈಲ್ವೆ ಕ್ರಾಸ್‌ನಿಂದ ಸಾವಿರಾರು ಜನರಿಗೆ ತೊಂದರೆಯಾಗುತ್ತಿದ್ದು, ಈ ಕಾಮಗಾರಿಯನ್ನು ಆದ್ಯತೆಯ ಮೇಲೆ ಸರ್ಕಾರ ಕೈಗೆತ್ತಿಕೊಳ್ಳುವುದೇ?	ಮಹಾಕಾಳಿ ಪಡ್ಪುನಲ್ಲಿರುವ ರೈಲ್ವೆ ಲೆವೆಲ್ ಕ್ರಾಸಿಂಗ್ ಬಳಿ ತೀವ್ರ ವಾಹನ ದಟ್ಟಣೆ ಉಂಟಾಗುತ್ತಿದ್ದು, ಇದನ್ನು ಪರಿಹರಿಸಲು ಕೆಳ ಸೇತುವೆ (Road Under Bridge-RUB) ಕಾಮಗಾರಿಯನ್ನು ಆದ್ಯತೆಯ ಮೇಲೆ ಕೈಗೊಳ್ಳಲು ರೈಲ್ವೆ ಇಲಾಖೆಯ ಅಧಿಕಾರಿಗಳೊಂದಿಗೆ ಸಮನ್ವಯ ಸಾಧಿಸಿ ಶೀಘ್ರವಾಗಿ ಕಾಮಗಾರಿ ಪ್ರಾರಂಭಿಸಲು ಮಂಗಳೂರು ಸ್ಮಾರ್ಟ್ ಸಿಟಿ ಲಿಮಿಟೆಡ್‌ರವರಿಂದ ಕ್ರಮ ಜರುಗಿಸಲಾಗುತ್ತಿದೆ.

ಸಂಖ್ಯೆ: ನಅಇ 77 ಸಿಎಸ್‌ಎಸ್ 2020

(ಬಿ.ಎ.ಬಸವರಾಜ)
ನಗರಾಭಿವೃದ್ಧಿ ಸಚಿವರು.